<u>ಸಾಕ್ಷಿಗೆ ದಿನಾಂಕ *05-02-2025* ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>

<u>ಪಾಟೀಸವಾಲು : *9* ನೇ ಪ್ರತಿವಾದಿಯ ಪರ ಶ್ರೀ ಎಮ್ ಹೆಚ್ ಎಮ್ . ವಕೀಲರಿಂದ:</u>

ನಾನು *10* ನೇ ತರಗತಿಯ ವರೆಗೆ ಓದಿರುತ್ತೇನೆ. ನನ್ನ ತಂದೆ ಚನ್ನಬಸಪ್ಪ *1986-87* ರಲ್ಲಿ ತೀರಿಕೊಂಡಿರುತ್ತಾರೆ. ನನ್ನ ಅಜ್ಜ ನನ್ನ ತಂದೆ ತೀರಿಕೊಂಡ *7* ರಿಂದ *8* ವರ್ಷಗಳ ನಂತರ ತೀರಿಕೊಂಡಿರುತ್ತಾರೆ. ನನ್ನ ಅಜ್ಜಿ ನನ್ನ ಅಜ್ಜ ತೀರಿಕೊಂಡ *3* ರಿಂದ *4* ವರ್ಷಗಳ ನಂತರ ತೀರಿಕೊಂಡಿರುತ್ತಾರೆ. ನನ್ನ ತಂದೆ ತೀರಿಕೊಳ್ಳುವಾಗ ಒಟ್ಟು ಕುಟುಂಬ ಇತ್ತು. ನನ್ನ ಅಜ್ಜ ತೀರಿಕೊಂಡ ನಂತರ ಕುಟುಂಬದ ದೇಖರಿಕೆಯನ್ನು ನನ್ನ ಚಿಕ್ಕಪ್ಪ ಈರಪ್ಪ ರವರು ಮಾಡುತ್ತಿದ್ದರು. ನನ್ನ ತಂದೆ ತೀರಿಕೊಳ್ಳುವ ಮೊದಲು *3* ಜನರ ಮದುವೆ ಆಗಿದ್ದು, ಅವರು ತೀರಿಕೊಂಡ ನಂತರ ಉಳಿದ *3* ಜನರ ಮದುವೆ ಅಗಿರುತ್ತದೆ. ನಮ್ಮ ಕುಟುಂಬದ ಎಲ್ಲ ವ್ಯವಹಾರಗಳನ್ನು ನನ್ನ ಅಜ್ಜ ರುದ್ರಪ್ಪ ಇರುವ ವರೆಗೂ ಅವರು ಮಾಡಿದ್ದು, ಅವರು ತೀರಿಕೊಂಡ ನಂತರ ರುದ್ರಪ್ಪ ರವರು ಮಾಡಿರುತ್ತಾರೆ ಎಂದರೆ ಸರಿ. ನನ್ನ ಅಜ್ಜ ರುದ್ರಪ್ಪ ಮತ್ತು ನನ್ನ ಚಿಕ್ಕಪ್ಪ ಈರಪ್ಪ ರವರು ಮಾಡಿದ ವ್ಯವಹಾರಗಳಿಗೆ ನಿಮ್ಮದು ಏನಾದರೂ ತಕರಾರು ಇತ್ತಾ ಎಂದರೆ ಸಾಕ್ಷಿದಾರರು ನಮಗೆ ಆಗ ತಿಳುವಳಿಕೆ ಇರಲಿಲ್ಲ ಎಂದು ಹೇಳುತ್ತಾರೆ. ನಮಗೆ ತಿಳುವಳಿಗೆ ಬಂದ ನಂತರ ರುದ್ರಪ್ಪ ಮತ್ತು ಈರಪ್ಪ ರವರು ಮಾಡಿದ ವ್ಯವಹಾರಗಳಿಗೆ ತಕರಾರು ಇತ್ತಾ ಎಂದರೆ ಸಾಕ್ಷಿದಾರರು ನಮಗೆ ಆ ವ್ಯವಹಾರಗಳ ಬಗ್ಗೆ ಗೊತ್ತಿರಲಿಲ್ಲ ಎಂದು ಹೇಳುತ್ತಾರೆ.

ರುದ್ರಪ್ಪ ರವರು ತೀರಿಕೊಂಡ ನಂತರ ಅವರ ವಾರಸುದಾರರು ಬೇರೆ ಬೇರೆ ವಾಸ ಮಾಡುತ್ತಿದ್ದಾರೆ. ಯಾವ ಇಸ್ವಿಯಿಂದ ಬೇರೆಯಾಗಿ ವಾಸ ಮಾಡುತ್ತಿದ್ದಾರೆ ಎಂದರೆ ಸಾಕ್ಷಿದಾರರು ಗೊತ್ತಿರುವುದಿಲ್ಲ ಎಂದು ಹೇಳುತ್ತಾರೆ. ರುದ್ರಪ್ಪ ರವರ ವಾರಸುದಾರರು ಬೇರೆ ಬೇರೆ ಕೆಲಸಗಳನ್ನು ಮಾಡುತ್ತಿರುವುದರಿಂದ ಬೇರೆ ಬೇರೆ ಯಾಗಿ ವಾಸ ಮಾಡುತ್ತಿದ್ದರು. *1995-96* ರಿಂದ ರುದ್ರಪ್ಪ ರವರ ವಾರಸುದಾರರು ಬೇರೆ ಬೇರೆ ಆಗಿ ವಾಸ ಮಾಡುತ್ತಿದ್ದರು ಮತ್ತು ಅವರ ಆಧಾರ ಕಾರ್ಡ ಮತ್ತು ರೇಷನ ಕಾರ್ಡ ಮತ್ತು ಇಲೆಕ್ಷನ್ ಕಾರ್ಡ ಬೇರೆ ಬೇರೆ ಆಗಿದ್ದವು ಎಂದರೆ ಸರಿ. *1995-96* ರಿಂದ ರುದ್ರಪ್ಪ ರವರ ವಾರಸುದಾರರು ಬೇರೆ ಬೇರೆ ಮನೆಗಳಲ್ಲಿ ವಾಸ ಮಾಡಿ ತಮ್ಮ ತಮ್ಮ ಅಡಿಗೆಯನ್ನು ಪ್ರತ್ಯೇಕವಾಗಿ ಮಾಡಿಕೊಳ್ಳುತ್ತಿದ್ದರು ಎಂದರೆ ಸರಿ.

ತುಳಸಿಗೇರೆ ಗ್ರಾಮದ ಜಮೀನು ಸರ್ವೆ ನಂ. *213*/ಸಿ ನಾನು ದಾವೆ ಸಲ್ಲಿಸುವ ಕಾಲಕ್ಕೆ ಯಾರ ಹೆಸರಿನಲ್ಲಿ ಇತ್ತು ಎಂದು ಗೊತ್ತಿರುವುದಿಲ್ಲ. ಸದರಿ ಆಸ್ತಿಯು ಗೋವಿಂದಪ್ಪ ರವರ ಹೆಸರಿನಲ್ಲಿ ಇತ್ತು ಎಂದು ನಮ್ಮ ವಕೀಲರಿಗೆ ಮಾಹಿತಿಯನ್ನು ನೀಡಿದ್ದೇನು. ಗೋವಿಂದಪ್ಪ ರವರ ಹೆಸರು ಯಾವ

ದಾಖಲೆಗಳ ಆಧಾರದ ಮೇಲೆ ಉತಾರೆಯಲ್ಲಿ ಬಂದಿತ್ತು ಎಂದು ನನಗೆ ಗೊತ್ತಿರುವುದಿಲ್ಲ. ನಾವು ದಾವೆ ಮಾಡುವ ಪೂರ್ವದಲ್ಲಿ *9* ನೇ ಪ್ರತಿವಾದಿಯನ್ನು ವಿಚಾರಿಸಿರುವುದಿಲ್ಲ ಮತ್ತು ಅವರಿಗೆ ನೋಟೀಸನ್ನು ನೀಡಿರುವುದಿಲ್ಲ. ಸದರಿ ಆಸ್ತಿಯು ರುದ್ರಪ್ಪ ರವರಿಗೆ ಹೇಗೆ ಬಂದಿತು ಎಂದರೆ ಸಾಕ್ಷಿದಾರರು ನನ್ನ ಅಜ್ಜ ರುದ್ರಪ್ಪ ರವರು ಸ್ವಾತಂತ್ರ್ಯ ಹೋರಾಟ ಗಾರರಾಗಿದ್ದು ಅವರಿಗೆ ಸರಕಾರದವರು ನೀಡಿದ್ದರು. ನಾನು ಸದರಿ ಜಮೀನಿಗೆ ಹೋಗಿರುವುದಿಲ್ಲ. ಸದರಿ ಆಸ್ತಿಯ ಸುತ್ತ ಮುತ್ತ ಯಾರ ಜಮೀನುಗಳು ಇರುತ್ತವೆ ಎಂದು ಗೊತ್ತಿರುವುದಿಲ್ಲ. *1997* ರಿಂದ ಇಲ್ಲಿಯವರೆಗೂ *9* ನೇ ಪ್ರತಿವಾದಿಯು ಯಾವ ಯಾವ ಬೆಳೆಗಳನ್ನು ಬೆಳೆದಿರುತ್ತಾನೆ ಎಂದು ಗೊತ್ತಿರುವುದಿಲ್ಲ. ದಿನಾಂಕ *20-11-1997* ರಂದು ನೋಂದಾಯಿತ ಖರೀದಿ ಪತ್ರದ ಮುಖಾಂತರ *9* ನೇ ಪ್ರತಿವಾದಿಯ ಹೆಸರು ಸದರಿ ಆಸ್ತಿಯ ದಾಖಲೆಗಳಲ್ಲಿ ಬಂದಿರುತ್ತದೆ ಎಂದರೆ ಸಾಕ್ಷಿದಾರರು ನಮಗೆ ಈ ದಾವೆಯನ್ನು ಸಲ್ಲಿಸುವಾಗ *2022* ರಲ್ಲಿ ತಿಳಿದಿತ್ತು ಎಂದು ಹೇಳುತ್ತಾರೆ. *1997* ರಲ್ಲಿ ನಮಗೆ ಈ ಕುರಿತು ಮಾಹಿತಿ ಇದ್ದರೂ ಕೂಡ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. *9* ನೇ ಪ್ರತಿವಾದಿಯು ಸದರಿ ಆಸ್ತಿಯನ್ನು ಖರೀದಿ ಮಾಡುವ ಮೊದಲು ಅದರಲ್ಲಿ ಒಣ ಬೇಸಾಯ ಇದ್ದು ಅವರು ಖರೀದಿ ಮಾಡಿದ ನಂತರ ಅವರು ಬೋರವೆಲ್ ಹಾಕಿಸಿ ನೀರಾವರಿ ಜಮೀನು ಆಗಿರುತ್ತದೆ ಎಂದರೆ ಸಾಕ್ಷಿದಾರರು ನನಗೆ ಗೊತ್ತಿರುವುದಿಲ್ಲ ಎಂದು ಹೇಳುತ್ತಾರೆ. *9* ನೇ ಪ್ರತಿವಾದಿಯು ಖರೀದಿ ಮಾಡಿದ ನಂತರ *30* ಲಕ್ಷ ರೂ.ಗಳನ್ನು ಖರ್ಚು ಮಾಡಿ ಅಭಿವೃದ್ಧಿ ಪಡಿಸಿ ತೋಟವನ್ನಾಗಿ ಮಾಡಿರುತ್ತಾರೆ ಎಂದರೆ ಸಾಕ್ಷಿದಾರರು ಗೊತ್ತಿರುವುದಿಲ್ಲ ಎಂದು ಹೇಳುತ್ತಾರೆ. ಸದರಿ ಆಸ್ತಿಯನ್ನು *9* ನೇ ಪ್ರತಿವಾದಿಯು ತೆಗೆದುಕೊಳ್ಳುವಾಗ ಈರಪ್ಪ ರವರ ಹೆಸರು ಇತ್ತು. ಈರಪ್ಪ ರವರ ಹೆಸರು ಎಷ್ಟನೇ ಇಸ್ವಿಯಲ್ಲಿ ಉತಾರೆಯಲ್ಲಿ ದಾಖಲೆಯಾಗಿರುತ್ತದೆ ಎಂದು ಗೊತ್ತಿರುವುದಿಲ್ಲ. ಯಾವ ದಾಖಲೆಗಳ ಆಧಾರದ ಮೇಲೆ ಈರಪ್ಪ ರವರ ಹೆಸರು ಬಂದಿತು ಎಂದು ನನಗೆ ಗೊತ್ತಿರುವುದಿಲ್ಲ. ಈ ದಾವೆಯನ್ನು ಹೊರತು ಪಡಿಸಿ ಅವರ ಕುಟುಂಬದಲ್ಲಿ ಆದ ಯಾವುದೇ ವ್ಯವಹಾರಗಳನ್ನು ನಾನು ಎಲ್ಲಿಯೂ ಪ್ರಶ್ನೆ ಮಾಡಿರುವುದಿಲ್ಲ. ನಾವು ದಾವಾ ಮಾಡುವ ಪೂರ್ವದಲ್ಲಿ *9* ನೇ ಪ್ರತಿವಾದಿಗೆ ಯಾವುದೇ ನೋಟೀಸನ್ನು ನೀಡಿರುವುದಿಲ್ಲ. *9* ನೇ ಪ್ರತಿವಾದಿಯು ತೆಗೆದುಕೊಳ್ಳುವ ಮೊದಲು ಈರಪ್ಪ ರವರು ಸದರಿ ಆಸ್ತಿಯನ್ನು ಸಾಗುವಳಿ ಮಾಡುತ್ತಿದ್ದರು ಎಂದರೆ ಸಾಕ್ಷಿದಾರರು ನನಗೆ ಗೊತ್ತಿರುವುದಿಲ್ಲ ಎಂದು ಹೇಳುತ್ತಾರೆ. ಸದರಿ ಆಸ್ತಿಗೆ ಸಂಬಂದಪಟ್ಟಂತೆ ರುದ್ರಪ್ಪ ರವರು ತೀರಿಕೊಂಡ ನಂತರ ಯಾರು ಯಾರು ಸಾಗುವಳಿ ಮಾಡಿರುತ್ತಾರೆ ಎಂದು ನಾನು ಯಾವುದೇ ದಾಖಲೆಗಳನ್ನು ನೋಡಿರುವುದಿಲ್ಲ. ನನಗೆ ಈ ಕುರಿತು ಯಾರು ಸಾಗುವಳಿ

ಮಾಡುತ್ತಾರೆ ಎಂದು ಗೊತ್ತಿರುವುದಿಲ್ಲ. ಯಾರು ಸಾಗುವಳಿ ಮಾಡುತ್ತಿರುತ್ತಾರೆ ಎಂದು ನಾನು ತಿಳಿದುಕೊಳ್ಳುವ ಪ್ರಯತ್ನ ಮಾಡಿರುವುದಿಲ್ಲ. ರುದ್ರಪ್ಪ ರವರು ತೀರಿಕೊಂಡ ನಂತರ ಅವರ ಕುಟುಂಬದ ವ್ಯವಸ್ಥೆಯ ಪ್ರಕಾರ ಸದರಿ ಆಸ್ತಿಯು ರುದ್ರಪ್ಪ ರವರಿಗೆ ಬಂದಿತು.ಅವರು ತಮ್ಮ ಪ್ರಪಂಚದ ಅಡಚಣೆಗೊಸ್ಕರ *9* ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. *9* ನೇ ಪ್ರತಿವಾದಿಯು ಎಷ್ಟು ಹಣವನ್ನು ಕೊಟ್ಟು ಖರೀದಿ ಮಾಡಿರುತ್ತಾನೆ ಎಂದು ಈವರೆಗೂ ಗೊತ್ತಿರುವುದಿಲ್ಲ. *1997* ರಿಂದ ಇಲ್ಲಿಯವರೆಗೆ *9* ನೇ ಪ್ರತಿವಾದಿಯು ಎಷ್ಟೇಷ್ಟು ಮೌಲ್ಯದ ಉತ್ಪನ್ನಗಳನ್ನು ಬೆಳೆದಿರುತ್ತಾನೆ ಎಂದು ಗೊತ್ತಿರುವುದಿಲ್ಲ. ಸದರಿ ಜಮೀನಿನಿಂದ ಬಂದ ಆದಾಯದ ಮೇಲೆ ತನ್ನ ಕುಟುಂಬದ ನಿರ್ವಹಣೆಯನ್ನು *9* ನೇ ಪ್ರತಿವಾದಿಯು ಮಾಡುತ್ತಿದ್ದಾನೆ ಎಂದರೆ ಸಾಕ್ಷಿದಾರರು ಗೊತ್ತಿರುವುದಿಲ್ಲ ಎಂದು ಹೇಳುತ್ತಾರೆ. *9* ನೇ ಪ್ರತಿವಾದಿಯು ಸದ್ಭಾವನಾ ಖರೀದಿದಾರ ಇರುತ್ತಾರೆ ಎಂದರೆ ಸಾಕ್ಷಿದಾರರು ಗೊತ್ತಿರುವುದಿಲ್ಲ ಎಂದು ಹೇಳುತ್ತಾರೆ. ರುದ್ರಪ್ಪ ರವರು ತೀರಿಕೊಂಡ ನಂತರ ಅವರ ಕುಟುಂಬದವರಲ್ಲಿ ಆದ ಕುಟುಂಬ ವ್ಯವಸ್ತೆಯನ್ನು ಮುಚ್ಚಿಟ್ಟು ಈ ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. *9* ನೇ ಪ್ರತಿವಾದಿಯು ಸದರಿ ಆಸ್ತಿಯ ಮೇಲೆ ಸಾಲವನ್ನು ಮಾಡಿದ್ದು ಅದನ್ನು ಯಾರು ತುಂಬುತ್ತಾರೆ ಎಂದರೆ ಸಾಕ್ಷಿದಾರರು ಅವರು ಸಾಲ ಮಾಡಿರುವ ಬಗ್ಗೆ ನನಗೆ ಗೊತ್ತಿರುವುದಿಲ್ಲ ಎಂದು ಹೇಳುತ್ತಾರೆ. *9* ನೇ ಪ್ರತಿವಾದಿಯು ಸದರಿ ಆಸ್ತಿಯ ಮೇಲೆ ವಿಜಯ ಬ್ಯಾಂಕನಲ್ಲಿ *1* ಲಕ್ಷ *16* ಸಾವಿರ, *60* ಸಾವಿರ, *3* ಲಕ್ಷ ಮತ್ತು *3* ಲಕ್ಷ ರೂ.ಗಳ ಸಾಲವನ್ನು ಮಾಡಿದ್ದು ಮತ್ತು ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘದಲ್ಲಿ *95* ಸಾವಿರ ರೂ.ಗಳ ಸಾಲವನ್ನು ಮಾಡಿರುತ್ತಾರೆ ಎಂದರೆ ಸಾಕ್ಷಿದಾರರು ನನಗೆ ಗೊತ್ತಿರುವುದಿಲ್ಲಎಂದು ಹೇಳುತ್ತಾರೆ. ಈ ಸಾಲವನ್ನು ತೀರಿಸುವ ಜವಾಬ್ದಾರಿ ಯಾರದು ಎಂದು ಕೇಳಿದಾಗ ಸಾಕ್ಷಿದಾರರು ನನಗೆ ಗೊತ್ತಿರುವುದಿಲ್ಲ ಎಂದು ಹೇಳುತ್ತಾರೆ. ರುದ್ರಪ ತೀರಿಕೊಂಡ ನಂತರ ಕುಟುಂಬದ ವ್ಯವಸ್ತೆಯಲ್ಲಿ ಆದ ಹೊಂದಾಣಿಕೆಯಲ್ಲಿ ನಾವೆಲ್ಲ ವಾದಿಯರು ಭಾಗವಹಿಸಿರುತ್ತೇವೆ ಎಂದರೆ ಸರಿಯಲ್ಲ. ಕುಟುಂಬ ವ್ಯವಸ್ತೆಯಲ್ಲಿ ಆದ ಹೊಂದಾಣಿಕೆಯಲ್ಲಿ ಬೇರೆಯವರಿಗೆ ಜಮೀನುಗಳು ಬಂದಿದ್ದು, ಅವುಗಳಲ್ಲಿ ಪ್ಲಾಟ ಆಗಬಹುದು ಎಂದು ಈ ಸುಳ್ಳು ದಾವೆಯನ್ನು ಮಾಡಿರುತ್ತೇವೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿದೆ)

ಓ. ಹೇ. ಕೇ. ಸರಿ ಅದೆ.

ಹಿರಿಯ ದಿವಾಣಿ ನ್ಯಾಯಾಧೀಶರು,
ಹುನಗುಂದ.**ಮರು ವಿಚಾರಣೆ ಇರ**